ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 05-11-1970.

*ವಿಳಂಬವು ಅಪಾಯಕಾರಿ* (डिले इज़ डेन्जर)

ಎಲ್ಲರೂ ತಮ್ಮ ಪ್ರಕಾಶ ಮತ್ತು ಶಕ್ತಿಯನ್ನು (ಲೈಟ್-ಮೈಟ್) ಪರಿಶೀಲಿಸುಲು ಆಗುತ್ತಿದೆಯೇ? ತಾವು ತಮ್ಮಲ್ಲಿ ಪರೀಕ್ಷಿಸುವ ಶಕ್ತಿಯ ಅನುಭವ ಮಾಡುತ್ತೀರಾ? ತಮ್ಮನ್ನು ಇಲ್ಲಿಯವರೆಗೆ ಪುರುಷಾರ್ಥಿ ಮೂರ್ತಿ ಎಂದು ತಿಳಿಯುತ್ತೀರೋ ಅಥವಾ ಸಾಕ್ಷಾತ್ ಮತ್ತು ಸಾಕ್ಷಾತ್ಕಾರ ಮೂರ್ತಿ ಎಂದು ತಿಳಿಯುತ್ತೀರೋ ಅಥವಾ ಅನುಭವ ಮಾಡುತ್ತೀರೋ? ಅಥವಾ ಇದು ಅಂತಿಮ ಸ್ಥಿತಿಯೆಂದು ತಿಳಿಯುತ್ತೀರೋ? ಈ ಕ್ಷಣ ತಮ್ಮ ಭಕ್ತರು ತಮ್ಮ ಸಮ್ಮುಖದಲ್ಲಿ ಬಂದರೆ ತಮ್ಮ ಮುಖದಿಂದ ಅವರಿಗೆ ಯಾವ ಮೂರ್ತಿಯ ಸಾಕ್ಷಾತ್ಕಾರವಾಗುವುದು? ಸಾಕ್ಷಾತ್ಕಾರ ಮೂರ್ತಿ ಸದಾ ಸಂಪೂರ್ಣ ಸ್ಥಿತಿಯ ಸಾಕ್ಷಾತ್ಕಾರ ಮಾಡಿಸುತ್ತಾರೆ, ಆದರೆ ಈಗ ಒಂದು ವೇಳೆ ಯಾರಾದರೂ ಎದುರಿಗೆ ಬಂದರೆ ಅವರಿಗೆ ಈ ರೀತಿ ಸಾಕ್ಷಾತ್ಕಾರ ಮಾಡಿಸಬಲ್ಲಿರಾ? ತಮ್ಮ ಪುರುಷಾರ್ಥದ ಏರಿಳಿತದ ಸಾಕ್ಷಾತ್ಕಾರ ಅವರಿಗೆ ಆಗುವುದಿಲ್ಲ ತಾನೆ? ಫೋಟೋ ತೆಗೆಯುವಾಗ ಯಾರಾದಾರೂ ಅಲುಗಾಡಿದರೆ ಫೋಟೋ ಸರಿಯಾಗಿ ಬರುವುದೆಯೇ? ಅದೇ ರೀತಿ ಪ್ರತಿ ಕ್ಷಣ ನಮ್ಮ ಫೋಟೋ ತೆಗೆಯಲಾಗುತ್ತಿದೆ ಎಂದು ತಿಳಿಯಿರಿ. ಫೋಟೋ ತೆಗೆಯುವಾಗ ಎಲ್ಲಾ ಪ್ರಕಾರದ ಗಮನ ಕೊಡಲಾಗುವಂತೆ ತಮ್ಮ ಮೇಲೆ ಸದಾ ಗಮನವಿಟ್ಟುಕೊಳ್ಳಬೇಕು. **ಒಂದೊಂದು ಕ್ಷಣ ಈ ಸರ್ವೋತ್ತಮ ಅಥವಾ ಪುರುಷೋತ್ತಮ ಸಂಗಮಯುಗದ ಡ್ರಾಮಾ ರೂಪದ ಕ್ಯಾಮರಾದಲ್ಲಿ ಎಲ್ಲರ ಫೋಟೋ ತೆಗೆಯಲಾಗುತ್ತದೆ. ಅದೇ ಚಿತ್ರ ನಂತರ ಚರಿತ್ರೆಯ ರೂಪದಲ್ಲಿ ಗಾಯನವಾಗುತ್ತಿರುತ್ತದೆ ಮತ್ತು ಈಗಿನ ಭಿನ್ನ ಭಿನ್ನ ಸ್ಥಿತಿಯ ಚಿತ್ರ ಭಿನ್ನ-ಭಿನ್ನ ರೂಪದಲ್ಲಿ ಪೂಜಿಸಲ್ಪಡುತ್ತವೆ** . ಎಲ್ಲಾ ಸಮಯದಲ್ಲಿ ನಮ್ಮ ಚಿತ್ರ ಡ್ರಾಮಾ ರೂಪಿ ಕ್ಯಾಮರಾದ ಮುಂದೆ ತೆಗೆಯಲಾಗುತ್ತಿದೆ ಎಂಬುದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ. ಈಗಿನ ಒಂದೊಂದು ಚಿತ್ರ ಒಂದೊಂದು ಚರಿತ್ರೆ, ಗಾಯನ ಮತ್ತು ಪೂಜೆಗೆ ಯೋಗ್ಯವಾಗುವುದು. ಇಲ್ಲಿಯೂ ತಾವು ಹೇಗೆ ಯಾವುದೇ ನಾಟಕವನ್ನು ರಂಗಮಂಚದ ಮೇಲೆ ಮಾಡುವಾಗ ಮತ್ತು ಸಾಕ್ಷಾತ್ಕಾರ ಮಾಡಿಸುವಾಗ ಎಷ್ಟು ಗಮನ ಕೊಡುತ್ತೀರಿ. ಅದೇ ರೀತಿ ಬೇಹದ್ದಿನ ರಂಗಮಂಚದ ಮೇಲೆ ಪಾತ್ರ ಅಭಿನಯಿಸುತ್ತಿದ್ದೇನೆ ಎಂದು ತಿಳಿಯಿರಿ. ಇಡೀ ವಿಶ್ವದ ಆತ್ಮರ ದೃಷ್ಟಿ ನನ್ನ ಕಡೆಗಿದೆ. ಈ ರೀತಿ ತಿಳಿಯುವುದರಿಂದ ಸಂಪೂರ್ಣತೆಯನ್ನು ಧಾರಣೆ ಮಾಡುವಿರಿ. ತಿಳಿಯಿತೇ ಸಹಜವಾಗಿ ಬೇಗನೆ ಸಂಪೂರ್ಣರಾಗಲು ಒಂದು ಸ್ಲೋಗನ್ ಸದಾ ನೆನಪಿಡಿ. ಅದು ಯಾವುದು? (ಹೋಗುವುದು ಮತ್ತು ಬರುವುದು) ಇದು ಸರಿ ಆದರೆ ಹೋಗುವುದು ಹೇಗೆ ಸಂಪೂರ್ಣರಾಗಿ ಹೋಗುವುದಾ ಅಥವಾ ಹಾಗೆಯೇ ಹೋಗುವುದಾ? ಇದಕ್ಕಾಗಿ ಏನನ್ನು ನೆನಪಿಟ್ಟುಕೊಳ್ಳಬೇಕು? "ವಿಳಂಬವು ಅಪಾಯಕಾರಿ", ಯಾವುದೇ ಮಾತಿನಲ್ಲಿ ವಿಳಂಬ ಮಾಡಿದರೆ ರಾಜ್ಯಭಾಗ್ಯದ ಅಧಿಕಾರವನ್ನು ಪಡೆಯುವುದರಲ್ಲಿಯೂ ಅಷ್ಟೇ ತಡವಾಗುವುದು. ಆದ್ದರಿಂದ ವರ್ತಮಾನ ಸಮಯಕ್ಕನುಸಾರ ಒಂದು ಕ್ಷಣದ ವಿಳಂಬವನ್ನು ಸಹ ಮಾಡಬಾರದು ಎಂಬುದನ್ನು ಸದಾ ನೆನಪಿಡಿ. ಇತ್ತೀಚೆಗೆ ಸಂಪೂರ್ಣ(complete) ಕರ್ಮಾತೀತರಾಗಲು ಪುರುಷಾರ್ಥ ಮಾಡುತ್ತಾ ಮುಖ್ಯ ಒಂದು ದೂರು (complaint) ಕಾಲಕಾಲಕ್ಕೆ ಎಲ್ಲರದೂ ಬರುತ್ತದೆ. ಸಂಪೂರ್ಣರಾಗಲು ಬಯಸುತ್ತಾರೆ ಆದರೆ ಅದು ಆಗಲು ಕೊಡುವುದಿಲ್ಲ. ಅದಾವ ದೂರು? ವ್ಯರ್ಥ ಸಂಕಲ್ಪಗಳು. ಸಂಪೂರ್ಣರಾಗಲು ವ್ಯರ್ಥ ಸಂಕಲ್ಪಗಳ ಬಿರುಗಾಳಿ ವಿಘ್ನ ಹಾಕುತ್ತದೆ. ಇದು ಬಹುಸಂಖ್ಯಾತರ ದೂರಾಗಿದೆ. ಈಗ ಇದನ್ನು ಅಳಿಸಲು ಇಂದು ಯುಕ್ತಿ ಹೇಳುತ್ತೇವೆ. ಮನಸ್ಸಿನ ವ್ಯರ್ಥ ಸಂಕಲ್ಪಗಳ ದೂರು ಹೇಗೆ ಪೂರ್ಣವಾಗುವುದು? ನೆನಪಿನ ಯಾತ್ರೆಯಂತೂ ಮುಖ್ಯ ಮಾತಾಗಿದೆ ಆದರೆ ಇದಕ್ಕಾಗಿ ಭಿನ್ನ-ಭಿನ್ನ ಯುಕ್ತಿಗಳಿವೆ. ಅವು ಯಾವವು? ದೊಡ್ಡ ಮನುಷ್ಯರ ಕಡೆಗೆ ಅವರ ಎಲ್ಲಾ ಸಮಯದ ಕಾರ್ಯಸೂಚಿಯ (ಟೈಮ್ ಟೇಬಲ್, ವೇಳಾಪಟ್ಟಿ) ಡೈರಿಯಿರುತ್ತದೆ. ಅವರ ಒಂದೊಂದು ಗಂಟೆ ನಿಗದಿಯಾಗಿರುತ್ತದೆ. ಅದೇ ರೀತಿ ತಾವೂ ಸಹ ಉನ್ನತೋನ್ನತ ಮನುಷ್ಯರಲ್ಲವೇ? ಹಾಗಾದರೆ ಪ್ರತಿದಿನ ಅಮೃತವೇಳೆಯಿಂದ ಇಡೀ ದಿನದ ತಮ್ಮ ನಿಗದಿತ ಕಾರ್ಯದ ಡೈರಿ ಮಾಡಿರಿ. ತಮ್ಮ ಮನಸ್ಸನ್ನು ಎಲ್ಲಾ ಸಮಯದಲ್ಲಿ ನಿಗದಿತ ಕಾರ್ಯದಲ್ಲಿ ವ್ಯಸ್ತವಾಗಿಟ್ಟರೆ

ಮಧ್ಯದಲ್ಲಿ ವ್ಯರ್ಥ ಸಂಕಲ್ಪ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಿಗದಿಗೊಳಿಸದೇ ಖಾಲಿಯಾಗಿರುವ ಕಾರಣ ವ್ಯರ್ಥ ಸಂಕಲ್ಪ ಸಮಯವನ್ನು ತೆಗೆದುಕೊಳ್ಳುತ್ತವೆ. ಹಾಗಾದರೆ ಸಮಯದ ಬುಕಿಂಗ್ ಮಾಡುವ ವಿಧಿಯನ್ನು ಕಲಿಯಿರಿ. ಇಂದು ಇಡೀ ದಿನದಲ್ಲಿ ಏನೇನು ಮಾಡಬೇಕು ಎಂಬ ತಮ್ಮ ಕಾರ್ಯದ ಸೂಚಿಯನ್ನು ತಾವೇ ಮಾಡಿ, ಆಗ ಸಮಯ ಸಫಲವಾಗುವುದು. ಯಾವುದರಲ್ಲಿ ಮನಸ್ಸನ್ನು ನಿಗದಿಗೊಳಿಸಬೇಕು ಎಂಬುದಕ್ಕೆ ನಾಲ್ಕು ಮಾತುಗಳನ್ನು ಹೇಳಲಾಗಿದೆ. 1. ಮಿಲನ, 2. ವರ್ಣನೆ, 3. ಮಗ್ನ, 4. ಸಂಲಗ್ನತೆ. ನೆನಪಿನಲ್ಲಿ ಪೂರ್ಣ ಮಗ್ನರಾಗುವುದಕ್ಕೂ ಬಹಳ ಸಮಯ ಹೋಗುತ್ತದೆ. ಆದ್ದರಿಂದ ಮಗ್ನ ಅವಸ್ಥೆಯಲ್ಲಿ ಕಡಿಮೆಯಿರುತ್ತೀರಿ. ಆದ್ದರಿಂದ ಸಂಲಗ್ನತೆ, ಮಗ್ನ, ಮಿಲನ ಮತ್ತು ವರ್ಣನೆ. ವರ್ಣನೆಯಾಗಿದೆ ಸೇವೆ, ಮಿಲನವಾಗಿದೆ ಆತ್ಮಿಕ ಸಂಭಾಷಣೆ. ಬಾಪ್ ದಾದಾರ ಜೊತೆಗೆ ಮಿಲನ ಮಾಡುತ್ತೀರಲ್ಲವೇ? ಹಾಗಾದರೆ ಈ ನಾಲ್ಕು ಮಾತುಗಳಲ್ಲಿ ತಮ್ಮ ಸಮಯವನ್ನು ನಿಗದಿ ಮಾಡಿ, ಪ್ರತಿದಿನದ ತಮ್ಮ ದಿನಚರಿಯನ್ನು ನಿಗದಿಗೊಳಿಸಲು ಎಲ್ಲಾ ಸಮಯದ ಕಾರ್ಯಸೂಚಿ ನಿಗದಿಯಾಗಿದ್ದರೆ ಮಧ್ಯದಲ್ಲಿ ವ್ಯರ್ಥ ಸಂಕಲ್ಪಗಳು ತೊಂದರೆ ಕೊಡುವ ಸಮಯವೇ ಉಳಿಯುವುದಿಲ್ಲ. ದೊಡ್ಡ ಮನುಷ್ಯರು ವ್ಯಸ್ತರಾಗಿರುವ ಕಾರಣ ವ್ಯರ್ಥ ಮಾತುಗಳ ಕಡೆಗೆ ಗಮನ ಮತ್ತು ಸಮಯ ಕೊಡುವುದಿಲ್ಲ. ಅದೇ ರೀತಿ ತಮ್ಮ ದಿನಚರಿಯಲ್ಲಿ ಸಮಯವನ್ನು ನಿಗದಿಗೊಳಿಸಿಕೊಳ್ಳಿ. ಇಷ್ಟು ಸಮಯ ಈ ಮಾತಿಗೆ, ಈ ಸಮಯವನ್ನು ಈ ಮಾತಿಗೆ ಕೊಡುವುದು ಎಂದು ತಮ್ಮ ಕಾರ್ಯಸೂಚಿಯನ್ನು ನಿಶ್ಚಿತ ಮಾಡಿಕೊಳ್ಳಿ ಆಗ ಈ ದೂರು ಸಮಾಪ್ತಿಯಾಗಿ ಸಂಪೂರ್ಣರಾಗುವಿರಿ. (कम्पलेन खत्म होगी और कम्पलीट बन जाएगी||)

ಅವ್ಯಕ್ತ ಮುರಳಿ 05-11-1970.

*ವಿಳಂಬವು ಅಪಾಯಕಾರಿ*

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*

ನಾನಾತ್ಮಕ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಎದುರಿಗೆ ಯಾರೇ ಬಂದರೂ ಮುಖದಿಂದ ಸದಾ ಸಂಪೂರ್ಣ ಸ್ಥಿತಿಯ ಸಾಕ್ಷಾತ್ಕಾರವನ್ನು ಮಾಡಿಸುವ ಸಾಕ್ಷಾತ್ ಮತ್ತು ಸಾಕ್ಷಾತ್ಕಾರ ಮೂರ್ತಿ.

2. ನಾನು ಸಂಗಮ ಯುಗದ ಡ್ರಾಮಾ ರೂಪಿ ಕ್ಯಾಮೆರಾ ಪ್ರತಿಕ್ಷಣ ಫೋಟೋ ತೆಗೆಯುತ್ತಿದೆ ಎಂಬ ಸ್ಮೃತಿಯಿಂದ ಪ್ರತಿಯೊಂದು ಕರ್ಮವನ್ನು ಆಚರಿಸಿದ್ದೇನೆ.

3. ನನ್ನ ಚಿತ್ರ ಮತ್ತು ಚರಿತ್ರೆ ಮಹಿಮಾ ಯೋಗ್ಯವಾಗಿ, ಪೂಜಾ ಯೋಗ್ಯವಾಗಿ ಇದೆ.

4. ನಾನು ಬೇಹದ್ ಸ್ಟೇಜ್ ನ ಮಧ್ಯದಲ್ಲಿ ಪಾತ್ರವನ್ನು ಅಭಿನಯಿಸುತ್ತಿದ್ದೇನೆ, ಇಡೀ ವಿಶ್ವಾಸ್ಮರ ದೃಷ್ಟಿ ನನ್ನ ಕಡೆಗೆ ಇದೆ ಎಂದು ಭಾವಿಸಿ ಸಂಪೂರ್ಣತೆಯನ್ನು ಧಾರಣೆ ಮಾಡಿದ್ದೇನೆ.

5. ನಾನು "ವಿಳಂಬವು ಅಪಾಯಕಾರಿ" ಎಂಬ ಸ್ಲೋಗನನ್ನು ನೆನಪಿಟ್ಟು ಮೊದಲ ರಾಜ್ಯ ಭಾಗ್ಯದ ಅಧಿಕಾರವನ್ನು ಪಡೆದಿದ್ದೇನೆ.

6. ನಾನು ನನ್ನ ದಿನಚರಿ & ಸ್ಮೃತಿಯಾತ್ರೆಯಿಂದ ವ್ಯರ್ಥ ಸಂಕಲ್ಪಗಳ ದೂರನ್ನು ಸಮಾಪ್ತಿ ಮಾಡಿ ಸಮಯವನ್ನು ಸಫಲ ಮಾಡಿಕೊಂಡಿದ್ದೇನೆ.

7. ನಾನು ಸಂಲಗ್ನತೆ, ಮಗ್ನ ಸ್ಥಿತಿ, ಮಿಲನ ಮತ್ತು ವರ್ಣನೆ ಈ ನಾಲ್ಕು ವಿಷಯಗಳಿಗೆ ಕೂಡ ಸಮಯವನ್ನು ನಿರ್ಣಯಿಸಿಕೊಂಡಿದ್ದೇನೆ.